ಉ) ಈ ಬಗ್ಗೆ ಸರ್ಕಾರದವರಿಂದ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಯವರು)

ಅ) ರಾಜ್ಯದಲ್ಲಿ ಎಲ್ಲಾ ಕೆರೆ ಅಂಗಳಗಳನ್ನು ಒತ್ತುವರಿ ಮಾಡಿಲ್ಲ.

ಆ) ಹೌದು

ಇ) ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

ಈ) ವಿರುದ್ಧವಾಗುವುದಿಲ್ಲ

ಉ) ಕಾನೂನು ರೀತ್ಯ ಒಕ್ಕಲೆಬ್ಬಿಸಲಾಗುವುದು.

ತುಮಕೂರು ಜಿಲ್ಲೆಯಲ್ಲಿ ಗ್ರಾಮ ಲೆಕ್ಕಿಗರ ಹುದ್ದೆಗಳ ಭರ್ತಿ

3510 - ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳೆಷ್ಟು?

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದೇ?

ಇ) ಹಾಗಿದ್ದಲ್ಲಿ ಆ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಒಟ್ಟು 173 ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇವೆ. ತಾಲ್ಲೂಕುವಾರು ವಿವರ ಕೆಳಗಿನಂತಿದೆ:

1) ತುಮಕೂರು	17
2) ಗುಬ್ಬಿ	17
3) ಕುಣಿಗಲ್	21
4) ತಿಪಟೂರು	16
5) ತುರುವೆಕೆರೆ	18
6) ಸಿ.ಎನ್.ಹಳ್ಳಿ	16
7) ಮಧುಗಿರಿ	15
8) ಶಿರಾ	21
9) ಪಾವಗಡ	21
10) ಕೊರಟಗೆರೆ	11
	173

ಆ) ಹೌದು

ಇ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರ ಕ್ರಮ ತೆಗೆದುಕೊಳ್ಳಲಾಗುತ್ತದೆ

ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಹಣ ಬಿಡುಗಡೆ

3524 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಕೃಷಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ 1989-90, 90-91 ಮತ್ತು 91-92ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣ ಎಷ್ಟು?

ಆ) ಇದರಲ್ಲಿ ಸಿಬ್ಬಂದಿ ವೇತನ, ಪ್ರವಾಸ ಭತ್ಯೆ ಹಾಗೂ ಇತರೆ ಭತ್ಯೆಗಳಿಗೆ ಖರ್ಚಾದ ಹಣವೆಷ್ಟು?

ಇ) ಈ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಇತ್ತೀಚೆಗೆ ಎಷ್ಟು ಬಗ್ಗೆಯ ಹತ್ತಿ ಬೀಜಗಳ ಸಂಶೋಧನೆಯನ್ನು ಮಾಡಲಾಯಿತು?

ಈ) ಕೃಷಿ ವಿಶ್ವವಿದ್ಯಾನಿಲಯದಲ್ಲಿ ತೋಟಗಾರಿಕೆ ಹಾಗೂ ಹೈನುಗಾರಿಕೆ ಮತ್ತು ರೇಷ್ಮೆ ಬೆಳೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಸಂಶೋಧನೆಯನ್ನು ಕೈಗೊಳ್ಳಲು ಯಾವ ಕ್ರಮ ಕೈಗೊಂಡಿದೆ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು)

ಅ)

	ಬಾಕಿ ಅನುದಾನ (ಲಕ್ಷಗಳಲ್ಲಿ)	ಅಭಿವೃದ್ಧಿ ಅನುದಾನ (ಲಕ್ಷಗಳಲ್ಲಿ)
1989-90	375.62	195.00
1990-91	331.38	250-00
1991-92 (ಜೂನ್‌ವರೆಗೆ)	109.00	90.00

ಆ)

	ಸಿಬ್ಬಂದಿ ವೇತನ	ಪ್ರವಾಸ ಭತ್ಯೆ	ಇತರೆ ಭತ್ಯೆ
	ಲಕ್ಷಗಳಲ್ಲಿ	ಲಕ್ಷಗಳಲ್ಲಿ	ಲಕ್ಷಗಳಲ್ಲಿ
1989-90	376-42	004.78	1.11
1990-91	274-06	004.09	1.15
1991-92 (ಜೂನ್‌ವರೆಗೆ)	095-37	000.79	0.28

ಇ) ಈ ಕೆಳಗಿನ ಐದು ತಳಿಗಳನ್ನು ಸಂಶೋಧಿಸಲಾಗಿದೆ.

1. ಅಭಾದಿತ್
2. ಅರುಣ
3. ಗೌರಿ
4. ಗಣೇಶ(ಎ)
5. ಡಿ.ಸಿ.ಹೆಚ್-2

ಈ) ತೋಟಗಾರಿಕೆಯಲ್ಲಿ

1. 8ನೇ ಯೋಜನೆಯಲ್ಲಿ ಐ.ಸಿ.ಎ.ಆರ್. ಅಡಿಯಲ್ಲಿ ಅಲುಗಡ್ಡೆ ಬೆಳೆಯ ಸಂಶೋಧನಾಘಟಕ ಸ್ಥಾಪಿಸಲಾಗುವುದು.
2. ಮೆಣಸಿನಕಾಯಿ, ಈರುಳ್ಳಿ, ಒಣ ಬೇಸಾಯದಲ್ಲಿ ಹಣ್ಣು ಮತ್ತು ತೋಟಗಾರಿಕೆ ಬೆಳೆಗಳ ಮೇಲೆ ಸಂಶೋಧನೆ ಕೈಗೊಳ್ಳಲು ಯೋಜನೆಗಳನ್ನು ರೂಪಿಸಲಾಗಿದೆ.
3. ತರಕಾರಿ ಬೆಳೆಗಳಾದ ಕೋಸು, ಬದೆನಕಾಯಿ, ಟೊಮೆಟೆ ಇತ್ಯಾದಿ ಬೆಳೆಗಳ ಸಂಶೋಧನಾ ಕಾರ್ಯಗಳನ್ನು ಎಸ್‌ಎಆರ್‌ಐಪಿ ಯೋಜನೆಯಲ್ಲಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ.
4. ಪ್ಲಾಂಟೇಷನ್ ಬೆಳೆಗಳ ಮೇಲೆ ಸಂಶೋಧನೆ ಕಾರ್ಯಗಳನ್ನು ಕೈಗೊಳ್ಳಲು ರೂಪು ರೇಖೆಗಳನ್ನು ಸಿದ್ದಗೊಳಿಸಲಾಗಿದೆ.

ಪೈಪುಗಾರಿಕೆ : ಕಳಿದು ಒಂದು ವರ್ಷದಿಂದ ಹೊಸ ಮಿಶ್ರ ತಳಿಗಳನ್ನು ತಂದು ಅಕಳು ಉತ್ಪಾದನೆ ಮತ್ತು ಇತರೆ ವಿಚಾರವಾಗಿ ಸಂಶೋಧನೆ ಮಾಡಲಾಗುತ್ತಿದೆ.

ರೇಷ್ಮೆ ಬೆಳೆಗಳ ಬಗ್ಗೆ : ಹೆಚ್ಚಿನ ಸಂಶೋಧನೆ ಹಾಗೂ ಅಭಿವೃದ್ಧಿ ಕೈಗೊಳ್ಳಲು ಯೋಜನೆಯನ್ನು ರೂಪಿಸಲಾಗುತ್ತಿದೆ.

ಗದಗ ಮತ್ತು ಹಾವೇರಿಯನ್ನು ಜಿಲ್ಲೆಗಳೆಂದು ಘೋಷಣೆ

3523 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದ್ದಿಗೌಡರ್ ಸಮಿತಿಯನ್ನು ವರದಿಯನ್ನು ಸರ್ಕಾರ ಒಪ್ಪಿದೆಯೇ?

ಆ) ಹಾಗಿದ್ದಲ್ಲಿ ಆ ವರದಿಯನ್ನು ಅನುಷ್ಠಾನಗೊಳಿಸಲು ಒಪ್ಪಿದೆಯೇ? ಸರ್ಕಾರ ಯಾವುದಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆಯೇ?

ಇ) ಗದಗ ಮತ್ತು ಹಾವೇರಿಯನ್ನು ಜಿಲ್ಲೆಗಳೆಂದು ಘೋಷಣೆ ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆಯೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಪರಿಶೀಲನೆಯಲ್ಲಿದೆ.

ಆ) ಇವರ ವರದಿ ಉಳಿದ ವರದಿಗಳ ಜೊತೆಯಲ್ಲಿ ತೀವ್ರ ಪರಿಶೀಲನೆಯಲ್ಲಿದೆ.

ಇ) ಹೌದು.

ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ಅಮೃತ್ ಮಹಲ್ ಕಾವಲಿನ ವಿಸ್ತೀರ್ಣ

3527 - ಶ್ರೀ ಎ.ವಿ. ಉಮಾಪತಿ, (ಹೊಳಲ್ಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ಅಮೃತ್ ಕಾವಲ್‌ನ ಒಟ್ಟು ವಿಸ್ತೀರ್ಣವೆಷ್ಟು?

ಆ) ಈ ಪೈಕಿ ಎಷ್ಟು ಎಕರೆ ಪ್ರದೇಶ ಬಿಡುಗಡೆಯಾಗಿದೆ?

ಇ) ಈ ಪ್ರದೇಶವನ್ನು ಕಂದಾಯ ಇಲಾಖೆಗೆ ಬಿಟ್ಟು ಕೊಡಲಾಗಿದೆಯೇ?

ಈ) ಹಾಗಿದ್ದಲ್ಲಿ, ಎಷ್ಟು ಎಕರೆ ಪ್ರದೇಶವನ್ನು ಕಂದಾಯ ಇಲಾಖೆಗೆ ಬಿಟ್ಟುಕೊಡಲಾಗಿದೆ?

ಉ) ಬಿಡುಗಡೆ ಆಗಿದ್ದಲ್ಲಿ, ಆ ಜಮೀನನ್ನು ಬಡವರಿಗೆ ಹರಿಜನರಿಗೆ ಹಂಚಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) 9,363 ಎಕರೆಗಳು 18 ಗುಂಟೆಗಳು.

ಆ) 200 ಎಕರೆಗಳು

ಇ) ಹೌದು

ಈ) 200 ಎಕರೆಗಳು

ಉ) 1969ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳಂತೆ ಅರ್ಹ ವ್ಯಕ್ತಿಗಳಿಗೆ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.

ಪಿತ್ರಾರ್ಜಿತ ಆಸ್ತಿಯ ಬಗ್ಗೆ

3528 - ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಿತ್ರಾರ್ಜಿತ ಆಸ್ತಿಗಳನ್ನು ಪಾಲು ಮಾಡುವಾಗ ಸದರಿ ಜಮೀನಿನ